Reg. No. | | | | | | | | | | | | |

**BBAKALN 302**

## III Semester B.B.A. Degree Examination, December 2024/January 2025
## (NEP – 2020) (2023-24 Batch Onwards)
## KANNADA

ಸಮಯ : 2 ಗಂಟೆಗಳು ಗರಿಷ್ಠಾಂಕಗಳು : 60

I. ಈ ಕೆಳಗಿನ **ಎರಡು** ಪ್ರಶ್ನೆಗಳಿಗೆ ಉತ್ತರಿಸಿರಿ : **(2×8=16)**

1) ಬದಲಾಗುತ್ತಿರುವ ಸಾಮಾಜಿಕ ಬದುಕಿನಲ್ಲಿ ಮೂಲ ಸಂಸ್ಕೃತಿ ಮರೆಯಾಗುವ ನೋವನ್ನು ''ಬತ್ತಲಾರದ ಗಂಗೆ'' ಕವನ ಹೇಗೆ ಅಭಿವ್ಯಕ್ತಿಸಿದೆ ? ವಿವರಿಸಿರಿ.

2) ಅಂಬಿಗರ ಚೌಡಯ್ಯನವರ ವಚನದಲ್ಲಿ ವ್ಯಕ್ತವಾಗಿರುವ ಗುರು-ಶಿಷ್ಯರ ಸಂಬಂಧ ಹಾಗೂ ಅರಿವಿನ ಮಹತ್ವವನ್ನು ವಿವರಿಸಿರಿ.

3) ಸಮಾಜದ ಅವಿಭಾಜ್ಯ ಅಂಗವಾಗಿರುವ ಜನರ ಜವಾಬ್ದಾರಿಗಳನ್ನು, ನೀತಿ ಬೋಧನೆಯನ್ನು 'ಸೋಮೇಶ್ವರ ಶತಕ'ದ ಹಿನ್ನೆಲೆಯಲ್ಲಿ ವಿವರಿಸಿರಿ.

4) ಪ್ರೀತಿ, ಮಾನವೀಯತೆ, ಮೌಲ್ಯಗಳು ಗಾಢವಾಗಿ ಅರಳಬೇಕೆಂಬ ಆಶಯ 'ನೆನಪಾಗಿ ಕಾಡುತ್ತೆ ಆ ಒಂದು ರೈಲು ಯಾನ' ಲೇಖನದಲ್ಲಿ ಮೂಡಿ ಬಂದ ಬಗೆಯನ್ನು ವಿವರಿಸಿರಿ.

S.D.M.C. OF BUSINESS MANAGEMENT LIBRARY

II. ಈ ಕೆಳಗಿನ **ಎರಡು** ಪ್ರಶ್ನೆಗಳಿಗೆ ಉತ್ತರಿಸಿರಿ : **(2×6=12)**

1) ''ಬಳೆಗಾರ ಎರಡು ಕುಟುಂಬಗಳ ಸೇತುವೆ'' – ವಿವರಿಸಿರಿ.

2) ಕಾಳಪ್ಪ ಮತ್ತು ಸಂಗಪ್ಪನ ವ್ಯಕ್ತಿತ್ವದ ಬಗ್ಗೆ ಬರೆಯಿರಿ.

3) ಯುಗಾದಿ ಕತೆಯಲ್ಲಿ ಬರುವ ಗೋಪಣ್ಣ ಮಾಸ್ತರರು ಹಾಗೂ ಕಾಸಿಂ ಸಾಬರ ಅನ್ಯೋನ್ಯತೆಯನ್ನು ಬರೆಯಿರಿ.

4) ಅಮ್ಮ ಹೇಳಿದ ಯಾವುದಾದರೂ ನಾಲ್ಕು ಸುಳ್ಳುಗಳನ್ನು ಬರೆಯಿರಿ.

III. **ಒಂದಕ್ಕೆ** ಭಾವ ಸ್ವಾರಸ್ಯ ಬರೆಯಿರಿ : **(1×4=4)**

ಗಂಗಾಳ ತುಂಬಾ ಗಂಜಿಯನ್ನಿಟ್ಟು ಕುಳಿತಿದ್ದಾಳೆ
ಗಂಗಜ್ಜಿ ಅಂಗಾಂಗ ಸುಕ್ಕಿ ಸೊರಗಿ
ಮುಟ್ಟಲಾರಳು ತೊಟ್ಟು, ಕಣ್ಣ ಮುಂದೆ ಕಟ್ಟಿದೆ ಅಲ್ಲಿ
ಕುರುಕ್ಷೇತ್ರಗಳ ರುಂಡ ರಕ್ತವೇಣಿ.

**ಅಥವಾ**

P.T.O.

ಅರಿಯದ ಗುರು ಅರಿಯದ ಶಿಷ್ಯಂಗೆ
ಅನುಗ್ರಹವ ಮಾಡಿದಡೇನಪ್ಪುದೆಲವೊ.
ಅಂಧಕನ ಕೈಯನಂಧಕ ಹಿಡಿದೆಡೆ,
ಮುಂದನಾರು ಕಾಂಬರು ಹೇಳಲೆ ಮರುಳೆ.
ತೊರೆಯಲದ್ದವನನೀಸಲರಿಯದವ
ತೆಗೆವ ತೆರನಂತೆಂದನಂಬಿಗರ ಚೌಡಯ್ಯ .

IV. **ಮೂರು** ವಿಷಯಗಳಿಗೆ ಸಂದರ್ಭ ಸ್ವಾರಸ್ಯ ಬರೆಯಿರಿ : **(3×4=12)**

1) ಕುರುಕ್ಷೇತ್ರ ಚಾಚುತ್ತಲಿದೆ ದೇಶದುದ್ದಕ್ಕೂ.
2) ಕಪ್ಪು ಬಿಳುಪು ಕೆಂಪು ವರ್ಣದ ಪದಕವೊಂದಿತ್ತು .
3) ಅಲ್ಲಿ ವೇದ ಘೋಷವಿಲ್ಲ, ತಮಿಳು ಪದ್ಯವೊರೆವರಿಲ್ಲ.
4) ತಾಯಿ ಕೊರಗುವರಲ್ಲಿ ನೀವಿಲ್ಲದೂರಿನಲಿ.
5) ಅಂಬುಧಿ ತುಂಬಿ ಮೇರೆದಪ್ಪಿದಲ್ಲಿ ಕಟ್ಟಿಂಗೆ ನಿಂದುದುಂಟೆ ?

V. **ಎರಡಕ್ಕೆ** ಟಿಪ್ಪಣಿ ಬರೆಯಿರಿ : **(2×4=8)**

1) ಎಂ ಗೋಪಾಲಕೃಷ್ಣ ಅಡಿಗ.
2) ಪು. ತಿ. ನ.
3) ಎಚ್. ಎಸ್. ನಾಗಮೋಹನ್ ದಾಸ್.
4) ಲಕ್ಷ್ಮೀಶ.

VI. **ಒಂದು** ವಾಕ್ಯದಲ್ಲಿ ಉತ್ತರಿಸಿರಿ : **(8×1=8)**

1) ಕನಕದಾಸರ ಗುರುಗಳು ಯಾರು ?
2) 'ಬತ್ತಲಾರದ ಗಂಗೆ' ಕವನದ ಕರ್ತೃ ಯಾರು ?
3) 'ರಂಗವಲ್ಲಿ' ಕವನವನ್ನು ಯಾವ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ ?
4) 'ನಮ್ಮಮ್ಮ ಅಂದ್ರೆ ನಂಗಿಷ್ಟ' ಯಾರ ಕೃತಿ ?
5) ಕೆ. ಎಸ್. ನ. ಅವರ ಪೂರ್ಣ ಹೆಸರೇನು ?
6) ಪುಲಿಗೆರೆಯ ಸೋಮನಾಥನ ಅಂಕಿತನಾಮ ಯಾವುದು ?
7) 'ತುರಂಗ' ಪದದ ಅರ್ಥ ಬರೆ.
8) ನಿರಂಜನ ವಾನಳ್ಳಿಯವರ ಊರು ಯಾವುದು ?

S.D.M.C. OF BUSINESS MANAGEMENT LIBRARY